ಹೋದದ್ದು, ಆ ದೇಶವನ್ನು ನಿರಂಕುಶತೆಯಿಂದ ರಕ್ಷಿಸಲೋ ಅಥವಾ ಅಫಘಾನಿಸ್ತಾನದ ಆಡಳಿತ ತಂತ್ರವನ್ನು ಆಕ್ರಮಿಸಿಕೊಳ್ಳಲೋ ಎನ್ನುವ ಪ್ರಶ್ನೆಯಿದೆ. ಒಂದೆಡೆ ಪ್ರಜಾತಾಂತ್ರಿಕ ವ್ಯವಸ್ಥೆಯನ್ನು 'ಸ್ಥಾಪಿಸಲು' ಅಮೆರಿಕ ತನ್ನ ಸೈನ್ಯವನ್ನು ಕಳುಹಿಸುತ್ತಿದ್ದರೆ, ಮತ್ತೊಂದೆಡೆ ನಿರಂಕುಶ ಸರ್ವಾಧಿಕಾರಿಗಳ ಜೊತೆಗೂ ವ್ಯವಹಾರ ನಡೆಸುವುದನ್ನು ಕಾಣಬಹುದು. ಚಾಮ್‌ಸ್ಕಿ ಈ ರೀತಿಯ ಅಂತರ್ ವಿರೋಧಗಳನ್ನು ವಿಸ್ತಾರವಾಗಿ ಚರ್ಚಿಸುತ್ತಾರೆ.

ಇದರಲ್ಲಿ ಒಂದು ಗಮ್ಮತ್ತಿನ ವಿಚಾರವಿದೆ. ಯಾವುದೇ ವಿಷಯವನ್ನು ರಾಷ್ಟ್ರಹಿತಕ್ಕಾಗಿ ಮಾಡುತ್ತಿದ್ದೇವೆ ಎಂದರೆ ಒಂದು ಮಟ್ಟದಲ್ಲಿ ಅದು ಪ್ರಶ್ನಾತೀತವಾಗುತ್ತದೆ. ಆದಕ್ಕೆ ಬರುವ ವಿರೋಧದ ದನಿಗಳು ಮೊದಲಿಗೆ ರಾಷ್ಟ್ರಹಿತದತ್ತ ತಮ್ಮ ಬದ್ಧತೆ ತೋರಿಸಿ, ನಂತರ ಕೇಳುತ್ತಿರುವ ಪ್ರಶ್ನೆಗಳು ರಾಷ್ಟ್ರಹಿತಕ್ಕೆ ವಿರೋಧಿಯಾಗಿಲ್ಲ ಎನ್ನುವುದನ್ನು ನಿರೂಪಿಸಬೇಕಾಗುತ್ತದೆ. ಹೀಗಾಗಿಯೇ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸುವುದು ಕಷ್ಟದ ಮಾತೆಂದು ಚಾಮ್‌ಸ್ಕಿ ವಾದಿಸುತ್ತಾರೆ. 'ಭಕ್ತಿ ಮಾರ್ಗ' ಸರಳವಾದ ಮಾರ್ಗ, ಅದು ನಂಬಿಕೆಯ ಮೇಲೆ ನಡೆಯುವ ಮಾರ್ಗ. ನಾಯಕರ ಉದ್ದೇಶ ಮಹತ್ತರವಾದದ್ದರಿಂದ ಆ ನಾಯಕರು ಮಾಡುವ ತಪ್ಪುಗಳು ತಪ್ಪುಗಳಾಗಿ ಕಾಣುವುದಿಲ್ಲ. ಆದರೆ, ಭಕ್ತಿಯ ಮಾರ್ಗ ಬಿಟ್ಟು ವಿಚಾರದ ಮಾರ್ಗ ಹಿಡಿದರೆ ವಾದವಿವಾದಗಳನ್ನು ಮಂಡಿಸಬೇಕು. ಅಲ್ಲಿ ಇದಮಿತ್ಥಂ ಎಂದು ಯಾವುದೇ ವಿಚಾರವನ್ನು ವರ್ಗೀಕರಿಸುವುದು ಕಷ್ಟದ ಮಾತು. ಭಾಷೆಯನ್ನು ಭಾವನಾತ್ಮಕವಾದ – ಸರಿ ತಪ್ಪಿನ ಬೈನರಿಗಳಲ್ಲಿ ಬಂಧಿಸಿದಾಗ, ಚರ್ಚೆ ಮೂಲ ವಿಷಯದಿಂದ ದೂರವಾಗಿ ಮೊದಲಿಗೆ ಯಾರ–ಯಾವ ವಿಚಾರದ ಪರ ಎನ್ನುವುದನ್ನು ನಾವು ನಿರ್ಧರಿಸಬೇಕಾದ ಅನಿವಾರ್ಯತೆಯನ್ನು ಉಂಟುಮಾಡುತ್ತದೆ.

ಉದಾಹರಣೆಗೆ, ನಮ್ಮ ನೋಟುಬಂದಿಯನ್ನೇ ತೆಗೆದುಕೊಳ್ಳೋಣ. ಕಪ್ಪುಹಣದ ವಿರದ್ಧ ಸಾರಿದ ಯುದ್ಧ ಎಂದು ಅದನ್ನು ಪರಿಭಾಷಿಸಿದಾಗ, ಸಮರ್ಥಿಸುವವರಿಗೆ ಆ ಉದ್ದೇಶವೇ ಸಮರ್ಥನೆಯಾಗಿ ಕಾಣುತ್ತದೆ. ಆದರೆ, ವಿರೋಧಿಸುವವರು, ಮೊದಲಿಗೆ ಕಪ್ಪುಹಣದ ವಿರುದ್ಧ ಯುದ್ಧ ಸಾರುವುದು ಸರಿಯಾದ ಮಾತೆಂದು ಸಮರ್ಥಿಸಿ, ನಂತರ ಕ್ರಿಯೆಯ ಲೋಪದೋಷಗಳ ವಿಶ್ಲೇಷಣೆಗೆ ಕೂರಬೇಕಾಗುತ್ತದೆ. ಆದರೆ, ಅದನ್ನು ಸಮರ್ಥಿಸುವವರಿಗೆ ಉದ್ದೇಶವೊಂದೇ ಸಾಕು. ಭಿನ್ನಮತಕ್ಕೆ ದಕ್ಕದೇ ಹೋಗುವ ಭಾಷಾ ಸರಳತೆಯೇ ಅದರ ವಾದಸರಣಿಯನ್ನು ಸಂಕೀರ್ಣವಾಗಿಸಿಬಿಡುತ್ತದೆ. ಬೆಂಗಳೂರಿನಿಂದ ಮೈಸೂರಿಗೆ ನಿರ್ಮಿಸುತ್ತಿರುವ ದಶಪಥ ಹೈವೆ ಪ್ರಯಾಣಕಾಲವನ್ನು ಹೇಗೆ ಕಡಿಮೆ ಮಾಡುತ್ತದೆ ಎಂದು ಸುಲಭವಾಗಿ ವಿವರಿಸಬಹುದು. ಆದರೆ, ಬೆಂಗಳೂರಿನ ಕಾರು ಮಾಲೀಕರು ಸುಗಮವಾಗಿ ಮೈಸೂರಿಗೆ ವಾರಾಂತ್ಯಕ್ಕೆ ಹೋಗಬೇಕಾದ 'ತುರ್ತಿ'ಗೆ ಎಷ್ಟು ಜನ ತಮ್ಮ ಭೂಮಿ, ವ್ಯಾಪಾರ, ಉಪಾಧಿಗಳನ್ನು ಕಳೆದುಕೊಂಡಿರಬಹುದು ಅನ್ನುವುದು ಸರಳವಾಗಿ ವಿವರಿಸುವ ಕಥೆಗಳಲ್ಲ. ಜೊತೆಗೆ ಅವರ ಕಥೆಗಳಿಗೆ ಮಾಧ್ಯಮದಲ್ಲಿ ಜಾಗವೂ ಇಲ್ಲ. ಯಾಕೆಂದರೆ ಹೆದ್ದಾರಿ ಅಂದರೆ ಪ್ರಗತಿ ಎಂದು ಪರಿಭಾಷಿಸಿ ಅದಕ್ಕೊಂದು ಫೈನಾಲಿಟಿಯನ್ನು ತಂದಿರಿಸಿದ್ದೇವೆ.

ಅಮೆರಿಕ ಒಂದು ಮುಕ್ತ, ಮತ್ತು ಉದಾರ ದೇಶ ಎನ್ನುವ ನಮ್ಮ ನಂಬಿಕೆಗಳನ್ನು ಚಾಮ್‌ಸ್ಕಿ ನುಚ್ಚುನೂರು ಮಾಡುತ್ತಾರೆ. ಅಲ್ಲಿ ಮುಕ್ತ ಮಾಧ್ಯಮವಿದೆ ಎನ್ನುವ ವಿಷಯವನ್ನು ಪದೇಪದೇ ಪ್ರಶ್ನಿಸುತ್ತಾರೆ. ಸರಕಾರವು ವ್ಯಾಪಾರಿಗಳ ಹಿತಾಸಕ್ತಿಗಳನ್ನು ಕಾಪಾಡುವತ್ತ ಕೆಲಸ ಮಾಡುತ್ತದೆಯೇ ಹೊರತು ಮಿಕ್ಕ ಜನರ ಬಗ್ಗೆ ಹೆಚ್ಚಿನ ಸಂವೇದನೆಯನ್ನು ತೋರುವುದಲ್ಲ ಎಂದು ವಾದಿಸುತ್ತಾರೆ. ಸಂವಾದವು ಒಂದು ಸಣ್ಣ ಗುಂಪಿನಲ್ಲಿ ಸಾಧ್ಯ. ಸಣ್ಣ ಗುಂಪು ಎಂದರೆ ನಮ್ಮೊಂದಿಗೆ, ನಮ್ಮ ಭಾಷೆ ಮಾತಾಡುವ, ನಮ್ಮ ಪರಿಭಾಷೆಯನ್ನು ಅರ್ಥಮಾಡಿಗೊಳ್ಳುವ ಜನ. ಈ ಜನ ನಮ್ಮಂತೆಯೇ ಇರುವುದರಲ್ಲಿ ಆಶ್ಚರ್ಯವೇನಿದೆ? ಮುಖ್ಯಧಾರೆಯಿಂದ ಬಿಟ್ಟುಹೋಗಿರುವ ಬಹುಜನರ ವಿಷಯಗಳನ್ನು ಚರ್ಚಿಸಬೇಕಾದರೆ, ಆ ಸಂವಹನದ ಸಂಕೀರ್ಣತೆಯೇ ನಮ್ಮನ್ನು ಅದರಿಂದ ದೂರವಾಗಿಸುತ್ತದೆ. ಹೀಗಾಗಿಯೇ ಭಿನ್ನಮತದ ಮಾತುಗಳನ್ನು ತಾಳ್ಮೆಯಿಂದ ಕೇಳಬೇಕಾಗುತ್ತದೆ. ಸಿವಿಲ್ ಸೊಸೈಟಿ ಅಥವಾ ಸ್ವಯಂಸೇವಾ ಸಂಸ್ಥೆಗಳು ಈ ವಿಚಾರಗಳನ್ನು ಎತ್ತಿದಾಗ ಅದನ್ನು ಅರಾಜಕತೆಯೆಂದು ಬಣ್ಣಿಸಿ ದಮನ